ಎದುರು ಟೇಬಲ್‌ನಲ್ಲಿ ಸುಧಾಕರ್ ಒಬ್ಬರೇ ಕುಳಿತಿರುವುದು ಕಂಡಿತು. ಸುಧಾಕರ್ ಡಿಗ್ರಿಯಲ್ಲಿ ಕ್ಲಾಸ್‌ಮೇಟ್ ಆಗಿದ್ದವನು. ಅವನ ಅಪ್ಪ ಆ ಕಾಲದಲ್ಲೆ ಎಂಎಲ್‌ಎ ಆಗಿದ್ದರಿಂದ ಅವನೂ ರಾಜಕೀಯ ಪ್ರವೇಶ ಮಾಡಿ ನಾಲ್ಕು ಬಾರಿ ಎಂಎಲ್‌ಎ ಆಗಿ ಒಮ್ಮೆ ಮಿನಿಸ್ಟರ್ ಕೂಡಾ ಆಗಿದ್ದ. ಈ ಬಾರಿ ಚುನಾವಣೆಯಲ್ಲಿ ಸೋತಿದ್ದ. ಋಗ್ವೇದಿಯವರನ್ನು ನೋಡಿ ಸುಧಾಕರ್ ಟೇಬಲ್ ಹತ್ತಿರ ಬಂದು ಎದುರು ಕುಳಿತು, ''ಏನು ಪ್ರೊಫೆಸರ್ ಹೇಗಿದ್ದೀರಿ.'' ಎಂದು ಮಾತು ತೆಗೆದಿದ್ದರು. ಋಗ್ವೇದಿ, ''ಫೈನ್, ನೀವು ಹೇಗಿದ್ದೀರಿ.'' ಎಂದು ಕೇಳಿದ್ದರು. ''ಏನೋ ಒಂಥರಾ ಬೇಜಾರು ಪ್ರೊಫೆಸರ್. ಒಮ್ಮೊಮ್ಮೆ ಯಾಕೆ ಬದುಕಿರಬೇಕೋ ಅನ್ನಿಸ್ತಿದೆ.'' ಎಂದಿದ್ದರು. ಅಷ್ಟರಲ್ಲಿ ಸುಧಾಕರ್ ಕಡೆಯವರು ಬಂದಿದ್ದರಿಂದ, ''ಓಕೆ ಪ್ರೊಫೆಸರ್ ಕ್ಯಾರಿ ಆನ್, ಮತ್ತೊಮ್ಮೆ ಸಿಗೋಣ.'' ಎಂದು ಎದ್ದು ಹೋಗಿದ್ದರು.



ಋಗ್ವೇದಿ ಊಟ ಮಾಡಿ ಮನೆ ತಲುಪಿದಾಗ ಮೂರೂವರೆ ಗಂಟೆಯಾಗಿತ್ತು. ನಾಳೆ ಏನಾದರಾಗಲಿ ಆಸ್ಪತ್ರೆಗೆ ಹೋಗಿ ವೆಂಕಟೇಶ್ ಯಾದವನನ್ನು ನೋಡಿಕೊಂಡು ಬರಬೇಕೆಂದು ತೀರ್ಮಾನ ಮಾಡಿಕೊಂಡ ಋಗ್ವೇದಿ ರಾತ್ರಿ ಹೊಟ್ಟೆಗೆ ಎರಡು ಬ್ರೆಡ್ ಆಮ್ಲೆಟ್ ಮಾಡಿಕೊಂಡಿದ್ದರು. ದೊಡ್ಡ ಮಗನಿಂದ ವಿಡಿಯೊ ಕಾಲ್ ಬಂದಿತ್ತು. ಆದರೆ, ಋಗ್ವೇದಿ ಕಾಲ್ ಕಟ್ ಮಾಡಿ, ಮಾಮೂಲಿ ಫೋನ್ ಮಾಡಿ, ''ಹಲೋ'' ಎಂದಿದ್ದರು.

''ಯಾಕಪ್ಪಾ ವಿಡಿಯೊ ಕಾಲ್ ಕಟ್ ಮಾಡ್ದೆ, ಆರಾಮಿದ್ದೀಯಾ?'' ಎಂದಿದ್ದ. ''ಹೂ ಕಣೊ ಆರಾಮಿದ್ದೀನಿ. ಹಾಳಾದ ವಿಡಿಯೊ ಕಾಲ್‌ನಲ್ಲಿ ಮುಖಗಳು ಒರಿಜಿನಲ್ಲಾಗಿ ಕಾಣಲ್ಲ.'' ಎಂದಿದ್ದರು. ''ನೀನ್ಯಾಕೋ ಇನ್ ಕೊಹೆರೆಂಟಾಗಿ ಮಾತಾಡ್ತ ಇದ್ದೀಯ ಅಪ್ಪ. ನಾನು, ತಮ್ಮ ಒಂದು ತೀರ್ಮಾನಕ್ಕೆ ಬಂದಿದ್ದೀವಿ. ನಾವು ಇಂಡಿಯಾಕ್ಕೆ ಬಂದು ಮೂರು ವರ್ಷ ಆಯ್ತು. ಇನ್ನೆರಡು ತಿಂಗಳಿಗೆ ಅಮ್ಮನ ವರ್ಷದ ತಿಥಿಯನ್ನು ಅಲ್ಲೇ ಮಾಡೋಣ ಅಂತ. ನಂತರ ನಿಮ್ಮನ್ನು ಇಲ್ಲಿಗೆ ಪರ್ಮನೆಂಟಾಗಿ ಕರೆದುಕೊಂಡು ಬಂದು ಬಿಡೋಣ ಅಂತ. ನಿನಗೆ ಗೊತ್ತಿಲ್ಲ, ಒಂಟಿತನ ಎಂಥ ಮನುಷ್ಯನನ್ನಾದರೂ ಮೆತ್ತಗೆ ಮಾಡುತ್ತೆ ಮತ್ತು ಹೆಚ್ಚು ಕಡಿಮೆ ಆದರೆ ಕೊಂದೂ ಬಿಡುತ್ತೆ'' ಎಂದಿದ್ದ. ''ಹೌದು, ನೀನು ಹೇಳೋದು ಸರಿ. ಇನ್ನೂ ಎರಡು ತಿಂಗಳಲ್ವಾ. ನೋಡೋಣ'' ಎಂದಿದ್ದರು ಋಗ್ವೇದಿ.

ಅಂದು ಮಧ್ಯಾಹ್ನ ಹನ್ನೆರಡು ಗಂಟೆಗೆ ವೆಂಕಟೇಶ್ ಯಾದವನನ್ನು ನೋಡಲು ಆಸ್ಪತ್ರೆಗೆ ಹೋದಾಗ, ಯಾದವ್ ಸ್ಪೆಶಲ್ ವಾರ್ಡಿಗೆ ಶಿಫ್ಟ್ ಆಗಿದ್ದ. ಅಲ್ಲಲ್ಲಿ ಬ್ಯಾಂಡೇಜ್‌ಗಳನ್ನು ಹಾಕಲಾಗಿತ್ತು. ಋಗ್ವೇದಿಯವರನ್ನು ಕಂಡು ಕಣ್ಣಿನಲ್ಲೆ ನಕ್ಕಿದ್ದ. ಮಂಚದ ಪಕ್ಕದ ಚೇರ್ ಮೇಲೆ ಕುಳಿತ ಋಗ್ವೇದಿ, ''ಏನಯ್ಯಾ ಹುಡುಗಾಟ ಆಡೋ ವಯಸ್ಸಾ ಇದು. ಅಂಥದ್ದೇನಯ್ಯಾ ನಿಂಗೆ ಆಗಿರೋದು?'' ಎಂದಿದ್ದರು.

''ಮುನ್ನೂರು ಕೋಟಿ ಲಾಸ್ ಆಯ್ತು ಸಾರ್ ಬಿಸಿನೆಸ್‌ನಲ್ಲಿ. ತಡಿಲಾರದೆ ಹಿಂಗೆ ಮಾಡ್ಕೊಬಿಟ್ಟೆ.'' ಎಂದು ಮೆಲ್ಲನೆಯ ಧ್ವನಿಯಲ್ಲಿ ಹೇಳಿದ್ದ. ಮುನ್ನೂರು ಕೋಟಿ! ಶಿವಶಿವಾ ತಲೆ ಸುತ್ತಿ ಬಂದಂತಾಯ್ತು ಋಗ್ವೇದಿಯವರಿಗೆ. ಅವರು ಸ್ವಲ್ಪ ಯಾದವ್ ಕಡೆ ಬಗ್ಗಿ, ''ಎಂಥ ಅವಿವೇಕಿನಯ್ಯಾ ನೀನು. ಎಲ್ಲಾದರೂ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡ್ಕೊಳ್ಳೋಕೆ ಹೋಗ್ತಾರೇನಯ್ಯಾ. ಅದಕ್ಕೊಂದು ಪ್ರಾಪರ್ ಪ್ರಿಪರೇಶನ್ ಬೇಕಾಗುತ್ತೆ. ನೀನು ನೇಣು ಬಿಗಿದುಕೊಳ್ಳಬೇಕಾಗಿತ್ತು. ಹದಿನೈದಿಪ್ಪತ್ತು ಸೆಕೆಂಡುಗಳಲ್ಲಿ ಉಸಿರು ಹೋಗ್ಬಿಟ್ಟಿರೋದು. ಮೊನ್ನೆ ಲಂಡನ್ನಿನಲ್ಲಿ ನನ್ನ ಪಿಎಚ್.ಡಿ. ಸ್ಟೂಡೆಂಟ್ ನಿಧಿ ಅಲೆಗ್ಸಾಂಡರ್ ನಿನ್ನ ಥರಾನೇ ಬಿಸಿನೆಸ್‌ನಲ್ಲಿ ಲಾಸಾಗಿ ಆತ್ಮಹತ್ಯೆ ಮಾಡಿಕೊಂಡ್ಲಂತೆ. ಅವಳು ನಿನ್ನಂಗೆ